**ಮಂಕಿ ಪಂಚಾಯತಿಗೆ ಏತ ನೀರಾವರಿ**

**2098(2159); ಶ್ರೀ ಮಂಕಾಳಸುಬ್ಬವೈದ್ಯ (ಭಟ್ಕಳ)**

ಅ) ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕು ಮಂಕಿ ಪಂಚಾಯಿತಿಗೆ ಶರಾವತಿ ನದಿಯಿಂದ ಏತ ನೀರಾವರಿ ಕಲ್ಪಿಸುವ ಯೋಜನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಇ) ರಾಜ್ಯದಲ್ಲಿ ಅತಿ ದೊಡ್ಡ ಪಂಚಾಯಿತಿ ಮತ್ತು ಒಣ ಭೂಮಿ ಹೊಂದಿರುವ ಮಂಕಿಗೆ ಶರಾವತಿ ನದಿಯಿಂದ ಏತ ನೀರಾವರಿ ಕಲ್ಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

**ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)**

ಅ) ಹೌದು

ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಮಂಕಿ ಪಂಚಾಯಿತಿ ವ್ಯಾಪ್ತಿಯ ಬಳಕೂರ ಗ್ರಾಮದ ಹತ್ತಿರ ಶರಾವತಿ ನದಿಯಿಂದ ಏತ ನೀರಾವರಿ ಯೋಜನೆ ನಿರ್ಮಾಣಕ್ಕಾಗಿ 2007–08ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ "ಪ್ರಧಾನ ಕಾಮಗಾರಿಗಳು" ಲೆಕ್ಕ ಶೀರ್ಷಿಕೆಯಡಿ ₹ 940.00 ಲಕ್ಷ ಅಂದಾಜು ಮೊತ್ತಕ್ಕೆ ₹ 285.00 ಲಕ್ಷ ಅನುದಾನ ಒದಗಿಸಲಾಗಿತ್ತು.

ಸದರಿ ಯೋಜನೆಗೆ ಅರಣ್ಯ ಇಲಾಖೆ, ಕೊಂಕಣ ರೇಲ್ವೆ ಪ್ರಾಧಿಕಾರ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಮತ್ತು ಅನುಮತಿಯನ್ನು ಪಡೆಯುವುದು ಕಷ್ಟಸಾಧ್ಯವಾಗಿರುವ ಕಾರಣ ಸದರಿ ಯೋಜನೆಯ ಬದಲಾಗಿ ಮಂಕಿ ಗ್ರಾಮದ ಹತ್ತಿರ ದೊಡ್ಡ ಹಳ್ಳಕ್ಕೆ ಬಂದಾರ ನಿರ್ಮಾಣ, ಖಾಜಿ ಹಳ್ಳಕ್ಕೆ ಬಂದಾರ ನಿರ್ಮಾಣ ಹಾಗೂ ಮಂಕಿ ಗ್ರಾಮದ ಹತ್ತಿರ ದೊಡ್ಡ ಬ್ರಿಡ್ಜ್ ಹತ್ತಿರ ಹೊಳೆತ್ತಿ ತಡೆಗೋಡೆ ನಿರ್ಮಾಣ ಮಾಡಿದಲ್ಲಿ ಈ ಯೋಜನೆಯ ಭಾಗಶಃ

ಅಚ್ಚುಕಟ್ಟು ಪ್ರದೇಶವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಬಹುದೆಂದು ಅಭಿಪ್ರಾಯಪಟ್ಟು ಸದರಿ ಕಾಮಗಾರಿಗಳನ್ನು ₹ 200.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಮಂಕಿ ಏತ ನೀರಾವರಿ ಯೋಜನೆ ಬದಲಾಗಿ ಬದಲಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಏತ ನೀರಾವರಿ ಯೋಜನೆಗೆ ಅರಣ್ಯ ಇಲಾಖೆ, ಕೊಂಕಣ ರೇಲ್ವೆ ಪ್ರಾಧಿಕಾರ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಮತ್ತು ಅನುಮತಿಯನ್ನು ಪಡೆಯುವುದು ಕಷ್ಟಸಾಧ್ಯವಾಗಿರುತ್ತದೆ.

**ಕಾಸರಗೋಡು ಹಂಚು ಕಾರ್ಖಾನೆ**

**2099(2160); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)**

ಅ) ರಾಜ್ಯದಲ್ಲಿ ಪ್ರಥಮ ಬಾರಿಗೆ ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕು, ಕಾಸರಗೋಡಿನಲ್ಲಿ ಸ್ಥಾಪನೆಯಾದ ಸಹಕಾರಿ ಹೆಂಚಿನ ಕಾರ್ಖಾನೆಯನ್ನು ಮುಚ್ಚಲು ಕಾರಣವೇನು;

ಆ) ಈ ಹೆಂಚಿನ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಿ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

**ಪ್ರಕಾಶ್ ಬಾ ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆಗಳು, ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ಮಾರುಕಟ್ಟೆ, ಪೈಪೋಟಿ, ಕಚ್ಚಾವಸ್ತುವಿನ ಬೆಲೆಯಲ್ಲಿ ಹೆಚ್ಚಳ, ಉತ್ಪಾದನಾ ವೆಚ್ಚ ಹೆಚ್ಚಾಗಿದ್ದರಿಂದ ಹಾನಿ ಅನುಭವಿಸಲು ಕಾರಣವಾಯಿತು. ಅಲ್ಲದೆ ಕಾರ್ಮಿಕರು ಮುಷ್ಕರ ಹೂಡಿದ್ದರಿಂದ ಹೊನ್ನಾವರ ತಾಲ್ಲೂಕಿನ ದಿ.ಎನ್.ಕೆ ಡಿಸ್ಟ್ರಿಕ್ಟ್ ಕೋ–ಆಪ್ ಟೈಲ್ಸ್ ಮ್ಯಾನುಫ್ಯಾಕ್ಚರಿಂಗ್ ಸೊಸೈಟಿ ಲಿ., ಕಾಸರಗೋಡು ಹೆಂಚಿನ